# ಆಧುನಿಕ ವಚನಗಳ ಆಶಯ ಮತ್ತು ಧೋರಣೆ.

**-ಕಿರಣ ವಲ್ಲೇಪುರೆ**
ಸಂಶೋಧನಾ ವಿದ್ಯಾರ್ಥಿ,
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

ವಚನ ಸಾಹಿತ್ಯ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರಿಂದ ಹುಟ್ಟಿ, ಸಮೃದ್ಧವಾಗಿ ರಚನೆಯಾಗಿ, ವಿಫುಲವಾಗಿ ಬೆಳೆದಿದೆ. ಸಮಾಜ ಸುಧಾರಣೆ, ಧಾರ್ಮಿಕ ಸುಧಾರಣೆ ವಚನಗಳ ಮುಖ್ಯ ಆಶಯವಾಗಿತ್ತು. ಅದಕ್ಕಾಗಿ ಶರಣರು ಸಮಾಜದಲ್ಲಿ ಬೇರೂರಿದ್ದ ಜಡ ಸಂಪ್ರದಾಯಗಳನ್ನು ತೊಡೆದುಹಾಕಿ, ತಮ್ಮ ವಚನಗಳ ಮೂಲಕ ಜನರಲ್ಲಿ ವೈಚಾರಿಕತೆಯ ಪ್ರಜ್ಞೆ ಮೂಡಿಸಿದರು.  ಅವರು ವರ್ಗ, ವರ್ಣ, ಜಾತಿ, ಲಿಂಗ, ಪ್ರದೇಶ ಭೇದಗಳನ್ನು ಮುರಿದುಹಾಕಿ ಅಗಾಧ ಪ್ರಮಾಣದಲ್ಲಿ ಸತ್ವಯುತವಾದಂತಹ ವಚನಗಳನ್ನು ರಚಿಸಿದರು. ಈ ವಚನಗಳು ಆದರ್ಶ ಬದುಕಿಗೆ ಪೂರಕವಾಗಿವೆ.

ಜೇಡರ ದಾಸಿಮಯ್ಯ ಆದ್ಯ ವಚನಕಾರ. ಬಸವಣ್ಣ ವಚನ ಚಳುವಳಿಯ ನೇತಾರ. ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ, ಆಯ್ದಕ್ಕಿ ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಅಂಬಿಗರ ಚೌಡಯ್ಯ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಹಡಪದ ಅಪ್ಪಣ್ಣ, ಸೂಳೆ ಸಂಕವ್ವೆ, ಮುಕ್ತಾಯಕ್ಕ, ಸತ್ಯಕ್ಕ, ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ, ಮುಂತಾದವರು ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳಲ್ಲಿ ಲಿಂಗ ಸಮಾನತೆ, ಜಾತಿ ಸಮಾನತೆ, ಮೌಢ್ಯತೆಯ ಖಂಡನೆ, ಸಾಮಾಜಿಕ ನ್ಯಾಯ, ಆತ್ಮವಿಮರ್ಶೆ, ಸಮಾಜ ವಿಮರ್ಶೆ, ಮಾನವೀಯ ಮೌಲ್ಯಗಳು ಇವೆ. ಕಾಯಕ ಮತ್ತು ದಾಸೋಹ ತತ್ವಗಳು ಶರಣರು ಕಟ್ಟಿಕೊಟ್ಟ ಮಹತ್ವದ ಕೊಡುಗೆಗಳಾಗಿವೆ. ಈ ಹನ್ನೆರಡನೆಯ ಶತಮಾನವು ವಚನ ಸಾಹಿತ್ಯದ ಸುವರ್ಣಯುಗವಾಗಿತ್ತು. ಆಗ ಶರಣರಿಗೆ ವಚನ ಒಂದು ಚಳುವಳಿ ಮಾಧ್ಯಮವಾಗಿತ್ತು. ಅವರು ವಚನಗಳ ಮೂಲಕ ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದರು. ಈ ಬಸವಾದಿ ಶರಣರ ಪ್ರಭಾವವು ನಂತರದ ಕನ್ನಡದ ಕವಿಗಳಾದ ಹರಿಹರ, ರಾಘವಾಂಕರ ಮೇಲಾಗಿದೆ.

ಶರಣರ ತರುವಾಯವು ಹದಿಮೂರನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ವರೆಗೆ ಕೆಲವರಿಂದ ವಚನಗಳು ರಚನೆಯಾಗಿವೆ. ಈ ಯುಗವನ್ನು ವಚನ ಸಾಹಿತ್ಯ ಚರಿತ್ರೆಯಲ್ಲಿ ಬಸವೋತ್ತರ ಯುಗ ಎಂದು ಕರೆಯಲಾಗುತ್ತದೆ. ಈ ಕಾಲದಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿ, ಸ್ವತಂತ್ರಸಿದ್ಧಲಿಂಗೇಶ್ವರ, ಷಣ್ಮುಖ ಸ್ವಾಮಿಗಳು, ಕುಷ್ಟಗಿ ಕರಿಬಸವೇಶ್ವರ, ದೇಶಿಕೇಂದ್ರ ಸಂಗನ ಬಸವಯ್ಯ, ಕಾಡಸಿದ್ಧೇಶ್ವರ ಮುಂತಾದವರು ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳು ಅನುಭಾವಿ ಕೇಂದ್ರಿತ ವಚನಗಳು ಮತ್ತು ಸಮಾಜಮುಖಿ ವಚನಗಳಾಗಿವೆ. ಈ ಕಾಲದಲ್ಲಿ ವಚನಗಳನ್ನು ರಚಿಸಿದವರೆಲ್ಲರೂ ಬಹುತೇಕರು ವಿವಿಧ ಮಠಗಳ ಸ್ವಾಮಿಗಳೇ ಆಗಿದ್ದಾರೆ. ಇವರಿಗೆ ವಚನ ರಚನೆಯು ಧರ್ಮ ಜಾಗೃತಿಯೂ, ಆಧ್ಯಾತ್ಮಿಕ ಸೆಳೆತವೂ ಆಗಿತ್ತು.

ಆಧುನಿಕ ಸಂದರ್ಭದಲ್ಲಿಯೂ ಹಲವಾರು ಆಧುನಿಕ ವಚನಕಾರರಿಂದ ವಚನಗಳು ರಚನೆಯಾಗಿವೆ. ವಚನ ಸಾಹಿತ್ಯ ಚರಿತ್ರೆಯಲ್ಲಿ ಇಪ್ಪತ್ತನೆಯ ಮತ್ತು ಇಪ್ಪತ್ತೊಂದನೆಯ ಶತಮಾನದ ವಚನ ಸಾಹಿತ್ಯವನ್ನು ಆಧುನಿಕ ವಚನ ಸಾಹಿತ್ಯ ಎಂದು ಪರಿಗಣಿಸಲಾಗುತ್ತದೆ. ಬಸವಾದಿ ಶರಣರ ವಚನಗಳ ಪ್ರಭಾವ ಮತ್ತು ಪ್ರೇರಣೆ ಆಧುನಿಕ

ವಚನಕಾರರ ಮೇಲಿದೆ. ಹರ್ಡೇಕರ ಮಂಜಪ್ಪ, ಎಸ್.ವಿ.ರಂಗಣ್ಣ, ಸಿದ್ಧಯ್ಯ ಪುರಾಣಿಕ, ಕುಮಾರಕಕ್ಕಯ್ಯ ಪೋಳ, ಶಿವಲಿಂಗಮ್ಮ ಕಟ್ಟಿ, ಎಲ್.ಬಿ.ಕೆ.ಆಲ್ದಾಳ್, ಸಿ.ಪಿ.ಕೆ., ಮಹಾದೇವ ಬಣಕಾರ, ಎಸ್.ವಿ.ಪರಮೇಶ್ವರ್ ಭಟ್ಟ, ಜ.ಚ.ನಿ., ಸಂಗಮೇಶ ಹೊಸಮನಿ, ಭಾರತಿ ಪಾಟೀಲ, ಚೆನ್ನಕ್ಕ ಪಾವಟೆ, ಎಚ್.ಆರ್.ಲೀಲಾವತಿ, ಸಂಗಮೇಶ ಹಂಡಗಿ, ಕಮಲಾ ಹಂಪನಾ, ಬಸವರಾಜ ಸಬರದ, ಶರಣಬಸಪ್ಪ ಅಪ್ಪ, ವಿಜಯಶ್ರೀ ಸಬರದ, ಶಿವಲೀಲಾ ಹಂಡಿಗಿ, ಜಯಶ್ರೀ ದಂಡೆ, ಚೆನ್ನಣ್ಣ ವಾಲೀಕರ, ಸಿದ್ಧರಾಮ ಪೋಲಿಸ್ ಪಾಟಿಲ, ಬಸವರಾಜ ರುಮಾಲ, ವಿಜಯಕುಮಾರ ಪರುತೆ, ಸೂಗಯ್ಯ ಹಿರೇಮಠ, ಸಿದ್ಧಲಿಂಗ ಮಹಾಸ್ವಾಮಿಗಳು, ದೇಶಾಂಶ ಹುಡಗಿ, ಗವಿಸಿದ್ಧಪ್ಪ ಎಚ್. ಪಾಟೀಲ, ಹಂಶಕವಿ, ಹಣಮಂತ ಮೆಲಕೇರಿ, ಸರಸ್ವತಿ ಚಿಮ್ಮಲಗಿ, ಶೈಲಜಾ ಉಡಚಣ, ಎಂ.ಜಿ.ಗಂಗನಪಳ್ಳಿ, ಎಂ.ಜಿ.ದೇಶಪಾಂಡೆ, ಜಗದೇವಿ ದುಬಲಗುಂಡೆ ಮುಂತಾದವರು ಪ್ರಮುಖ ಆಧುನಿಕ ವಚನಕಾರರರಾಗಿದ್ದಾರೆ. ಈ ಆಧುನಿಕ ಯುಗದಲ್ಲಿ ಎಲ್ಲಾ ವರ್ಗದ ಜನರು ಅಂದರೆ ಹಿಂದುಳಿದವರು, ದಲಿತರು, ಮಹಿಳೆಯರು ಮುಂತಾದವರು ಅಗಾಧ ಪ್ರಮಾಣದಲ್ಲಿ ವಚನಗಳನ್ನು ರಚಿಸಿದ್ದಾರೆ ಹಾಗೂ ರಚಿಸುತ್ತಿದ್ದಾರೆ.

ಆಧುನಿಕ ಕಾಲದ ಸಮಸ್ಯೆಗಳೇ ಆಧುನಿಕ ವಚನಕಾರರ ವಚನಗಳ ವಸ್ತುವಾಗಿದೆ. ಬಸವಾದಿ ಶರಣರಂತೆ ಆಧುನಿಕ ವಚನಗಳು ಸತ್ವಯುತವಾಗಿದ್ದು, ವೈವಿದ್ಯಮಯವಾಗಿ ರಚನೆಯಾಗಿವೆ. ಈ ಆಧುನಿಕ ವಚನಕಾರರ ಆಶಯ ಮತ್ತು ಧೋರಣೆಯನ್ನು ಅವರ ವಚನಗಳ ಮೂಲಕ ತಿಳಿಯೋಣ. ಆಧುನಿಕ ವಚನಕಾರರು ತಮ್ಮ ವಚನಗಳಲ್ಲಿ ತೀವ್ರವಾಗಿ ಸಾಮಾಜಿಕ ವಿಡಂಬನೆಯನ್ನು ಮಾಡಿದ್ದಾರೆ. ಈ ಕುರಿತಂತೆ ಚೆನ್ನಣ್ಣ ವಾಲೀಕಾರ ಅವರ ಒಂದು ವಚನ

"ಜಗವೊಂದು ವ್ಯಾಪಾರದ ಸಂತೆ, ಮಾಡುವೆ ಏಕೆ ಚಿಂತೆ

ವಿದ್ಯಾ ಸಂಸ್ಥೆಗಳಲ್ಲಿ ಕೋರ್ಟು-ಕಚೇರಿಗಳಲ್ಲಿ ಎಲ್ಲಿ ನೋಡಿದರಲ್ಲಿ

ವ್ಯಾಪಾರಿಗಳು ತುಂಬಿರಲು ರಾಜಕೀಯ ಜನ ಸೇರಿರಲು ಶಾಂತಿ

ನೀತಿ ದಯೆ, ಮಮತೆ, ಪ್ರೀತಿ-ಪ್ರೇಮ ಬೇಡುವ ಮಾತು

ಕಟುಕನಿಗೆ ಕುರಿ ಜೀವ ಉಳಿಸೆಂದು ಬೇಡಿದಂತೆಯೇ ಎಂದಾತ

ನಮ್ಮ ವಾಲೀಕರ ಚೆನ್ನಣ್ಣ"(ಗುಲಬರ್ಗಾ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ, ರಾಮಚಂದ್ರ ಗಣಾಪುರ, ೨೦೧೨, ಪು-೬೭)

ಇಂದಿನ ಕಾಲದಲ್ಲಿ ಎಲ್ಲವೂ ವ್ಯಾಪಾರಮಯವಾಗಿದೆ. ಶಿಕ್ಷಣ ಕೊಡುವ ವಿದ್ಯಾ ಸಂಸ್ಥೆಗಳು, ನ್ಯಾಯ ಕೊಡುವ ಕೊರ್ಟುಗಳು, ಸಾರ್ವಜನಿಕ ಸೇವೆಗಾಗಿ ಇರುವ ಸರ್ಕಾರಿ ಕಛೇರಿಗಳು ವ್ಯಾಪಾರಮಯವಾಗಿವೆ. ದುಡ್ಡು ಇಲ್ಲದೆ ಅಲ್ಲಿ ಜನರಿಗೆ ಸೇವೆ ಸಿಗುತ್ತಿಲ್ಲ. ಇಲ್ಲಿ ದಯೆ, ಮಮತೆ, ಪ್ರೀತಿ-ಪ್ರೇಮ ಮುಂತಾದವುಗಳಿರಬೇಕು ಎಂಬುದು ಈ ವಚನದ ಆಶಯವಾಗಿದೆ. ಸಾಮಾಜಿಕ ವಿಡಂಬನೆ ಕುರಿತಂತೆ ಬೀದರನ ಸಾಹಿತಿಗಳಾದ ಹಂಶಕವಿಯವರ ವಚನ

"ನಡೆದಾಡುವ ಮಾತನಾಡುವ ಜೀವಂತ ದೇವರನ ಬಿಟ್ಟು

ಗುಡಿ ಗುಂಡಾರ ಮಸನದ ಕಲ್ಲು ಬಂಡೆಗಳ ಕಂಡು

ಕಲ್ಲಿಗೆ ಹಣೆ ಹೊಡೆದು ಹಣೆಯೊಡೆದುಕೊಂಡೆನಯ್ಯ

ನಿಮ್ಮ ಅರಿಯದೆ ಹೋದೆ ಎನ್ನದತ್ತ ದಿಗಂಬರಾ"(ವಚನಕಾರಂಜಿ, ಹಂಶಕವಿ, ೨೦೦೭, ಪು-೬೫)

ಇಲ್ಲಿ ಗುಡಿಯಲ್ಲಿನ ಕಲ್ಲಿನ ಮೂರ್ತಿಯ ಪೂಜೆಯನ್ನು ಅಲ್ಲಗಳೆಯಲಾಗಿದೆ. ಇಲ್ಲಿ ಅರಿವಿಗೆ ಆದ್ಯತೆ ಕೊಡಲಾಗಿದೆ. ಅಲ್ಲದೆ ಇಲ್ಲಿ ತಂದೆ ತಾಯಿಗಳೆ ದೇವರು, ಅವರನ್ನೆ ಪೂಜಿಸಬೇಕು ಎಂದು ಹೇಳಲಾಗಿದೆ. ಸೂಕ್ಷ್ಮವಾಗಿ ಈ ವಚನ ಸಮಾಜದಲ್ಲಿನ ಮೌಢ್ಯ ಆಚರಣೆಯನ್ನು ಖಂಡಿಸುತ್ತದೆ.

ಆಧುನಿಕ ವಚನಕಾರರು ತಮ್ಮ ವಚನಗಳಲ್ಲಿ ಬಸವಾದಿ ಶರಣರಂತೆ ಸಮಾಜದಲ್ಲಿನ ಮೌಢ್ಯತೆಗಳನ್ನು ಖಂಡಿಸಿದ್ದಾರೆ. ಈ ಕುರಿತಂತೆ ಸಿದ್ಧಲಿಂಗ ಮಹಾಸ್ವಾಮಿಗಳ ವಚನ

"ಸತ್ತಾಗ ಸೂತಕವೆಂದು ಸರಿಯುವರು

ರೋಗ ಬಂದಾಗ ಸೋಂಕುವದೆಂದು ಓಡುವರು

ಹೊರಳಾಡಿ ಸಾಯುವಾಗ ಸಮೀಪ ಬಾರದವರು

ಸರಿಯುವರು ಓಡುವರು ಸಮೀಪ ಬಾರದವರು

ಸತ್ತ ದಿನ ವಾರದ ಊಟಕ್ಕೆ ಕಿಕ್ಕಿರಿದು ಕೂಡುವರು

ಈ ಸತ್ವಹೀನರು ಇದ್ದವರಿಗಿಂತ ಸತ್ತವರೆ

ಮೇಲು ನೋಡಾ ಆಧುನಿಕ ರಾಮಗಡ್ಡೀಶ್ವರ" (ಆಧುನಿಕ ವಚನಗಳು, ಹಂಶಕವಿ, ೨೦೦೮, ಪು-೧೫೫)

ಸಮಾಜದಲ್ಲಿ ಜನರು ಆಚರಣೆ ಮಾಡುವ ಕೆಲವು ಮೌಢ್ಯ ಆಚರಣೆಗಳಲ್ಲಿ ಸೂತಕವೂ ಒಂದು. ಸತ್ತ ವ್ಯಕ್ತಿಯ ಮನೆಗೆ ಸೂತಕವಿರುತ್ತದೆ ಎಂದು ಆ ಮನೆಯವರೊಂದಿಗೆ ಕೆಲವು ದಿನ ಜನ ದೂರವಿರುತ್ತಾರೆ. ಈ ರೀತಿಯ ಮೌಢ್ಯತೆಯನ್ನು ಇಲ್ಲಿ ಖಂಡಿಸಲಾಗಿದೆ. ಮೌಢ್ಯತೆಗಳ ಖಂಡನೆಯ ಕುರಿತಂತೆ ಎಲ್. ಬಿ. ಕೆ. ಆಲ್ದಾಳ ಅವರ ವಚನ

"ಅತ್ತೆ ಆಸ್ಪತ್ರೆಯಲ್ಲಿ ಸತ್ತರೆ

ಮನೆಯೇಕೆ ಬಿಡಬೇಕಯ್ಯ!

ಮೂಲಾ ನಕ್ಷತ್ರದಿ ಜನಿಸಿದ ಶಿಶುವಿಗೆ

ದೋಷ ಬಂದೊಡೆ ಜಂಗಮರಗೇಕೆ ದೋಷವಯ್ಯ!

ಉಡು ಮನೆಹೊಕ್ಕರೆ ಆ ಮನೆಗೇಕೆ ದೋಷವಯ್ಯ!

ಈ ಪುರೋಹಿತಶಾಹಿ ವರ್ತನೆಯ ಕಂಡು ನಗುವನಯ್ಯ!

ತಪೋವನ ಮಠಾಧೀಶ!(ಆಯ್ದ ವಚನಗಳು, ಬಸವರಾಜ ಸಬರದ, ೨೦೧೪, ಪು-೭೪)

ವ್ಯಕ್ತಿ ದೂರದ ಆಸ್ಪತ್ರೆಯಲ್ಲಿ ಸತ್ತರೂ ಜನ ತಮ್ಮ ಮನೆಯನ್ನು ಸೂತಕದ ಹೆಸರಲ್ಲಿ ಕೆಲವು ಕಾಲ ಬಿಡುವುದನ್ನು ಇಲ್ಲಿ ಖಂಡಿಸಲಾಗಿದೆ. ಮನೆ ಬಿಡುವ ಪದ್ಧತಿಯನ್ನು ಇಲ್ಲಿ ಖಂಡಿಸಲಾಗಿದೆ. ನಾವು ಈ ಮೌಢ್ಯ ಆಚರಣೆಗಳಿಂದ ಹೊರಬಂದು ವೈಚಾರಿಕರಾಗಿ, ವೈಜ್ಞಾನಿಕರಾಗಿ ಬದುಕಬೇಕು ಎಂಬುದು ಈ ವಚನದ ಆಶಯವಾಗಿದೆ.

ಆಧುನಿಕ ವಚನಕಾರರು ತಮ್ಮ ವಚನಗಳಲ್ಲಿ ಸಾಮಾಜಿಕ ವಿಡಂಬನೆಯಂತೆ ರಾಜಕೀಯ ವಿಡಂಬನೆಯನ್ನು ಮಾಡಿದ್ದಾರೆ. ರಾಜಕೀಯ ವಿಡಂಬನೆಗೆ ಸಂಬಂಧಿಸಿದಂತೆ ಗವಿಸಿದ್ಧಪ್ಪ ಎಚ್. ಪಾಟೀಲ ಅವರ ವಚನ

"ಜನಪರ ಆಡಳಿತ ನಡೆಸುತ್ತೇವೆಂದು

ಚುನಾವಣೆಯ ಮುನ್ನ ರಾಜಕೀಯ ಭಾಷಣವಯ್ಯ

ಬಹುಮತ ಬಂದಾಗ ಸಮ್ಮಿಶ್ರ ಸರಕಾರವೆಂದರಯ್ಯ

ಅವರಿವರ ಪಕ್ಷದ ನಾಯಕದ ಕಿತ್ತಾಟದಲ್ಲಿ

ಪ್ರಜಾಪ್ರಭುತ್ವವೇ ಹರಾಜು ನೋಡಯ್ಯ

ಆನ ಬಲಿಪಶುವಾದುದು ಕಂಡು ನೊಂದ

ಪಾಟೀಲ ಗವಿಸಿದ್ಧ" (ಬೀದರ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ, ಹಂಶಕವಿ, ೨೦೧೪, ಪು-೩೭,೩೮)

ರಾಜಕೀಯದಲ್ಲಿ ಜನಪ್ರತಿನಿಧಿಗಳು ಚುಣಾವಣೆಗೂ ಮುನ್ನ ಸುಳ್ಳು ಭರವಸೆಗಳನ್ನು ನೀಡಿ ಜನರಿಗೆ ಮೋಸ ಮಾಡುತ್ತಾರೆ. ಚುಣಾವಣೆಯಲ್ಲಿ ಗೆದ್ದ ನಂತರ ಅಧಿಕಾರಕ್ಕಾಗಿ, ಉನ್ನತ ಸ್ಥಾನಕ್ಕಾಗಿ ತಮ್ಮ-ತಮ್ಮಲ್ಲೆ ಕಚ್ಚಾಡುವುದನ್ನು ಈ ವಚನದಲ್ಲಿ ವಿಡಂಬಿಸಲಾಗಿದೆ. ರಾಜಕಾರಣಿಗಳು ಪರಸ್ಪರ ಆರೋಪದಲ್ಲಿ ತೊಡಗಿರುತ್ತಾರೆ; ಆದರೆ ಜನಸಾಮಾನ್ಯರ ಏಳಿಗೆಗೆ ಕೆಲಸ ಮಾಡುವುದಿಲ್ಲ. ಇದನ್ನು ಈ ವಚನದಲ್ಲಿ ವಿಡಂಬಿಸಲಾಗಿದೆ.

ಆಧುನಿಕ ವಚನಗಳಲ್ಲಿ ಸಮಾನತೆಯ ಆಶಯ ಇದೆ. ಸಾಮಾಜಿಕ ನ್ಯಾಯ ಪರಿಕಲ್ಪನೆಯ ಧೋರಣೆಯನ್ನು ಒಳಗೊಂಡ ಅನೇಕ ವಚನಗಳು ಆಧುನಿಕ ಸಂದರ್ಭದಲ್ಲಿ ರಚನೆಯಾಗಿವೆ. ಆಧುನಿಕ ವಚನಕಾರ್ತಿಯರು ತಮ್ಮ ವಚನಗಳಲ್ಲಿ ಲಿಂಗ ಅಸಮಾನತೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಸ್ತ್ರೀ-ಪುರುಷರಿಬ್ಬರೂ ಸಮಾನರು ಎಂದು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಈ ಕುರಿತಂತೆ ಶೀವಲಿಲಾ ಹಂಡಿಗಿ ಅವರ ವಚನ

"ಹೆಣ್ಣು ಹುಟ್ಟಿದರೆ

ಹೆಣ್ಣು ಹುಟ್ಟಿತೆಂದು ಹೀಯಾಳಿಸುವರಯ್ಯಾ

ಹೆಣ್ಣು ಬಾಳಿನ ಕಣ್ಣೆಂಬುದನು ಕಾಣದ ಕುರುಡರಯ್ಯಾ

ಹೊತ್ತು ಹೆತ್ತು ಸಲಹಿದ ತ್ಯಾಗಮಯಿಯನ್ನೆ

ಮರೆಯುವ ಕೃತಘ್ನರಯ್ಯ

ಹೆಣ್ಣು ಕುಟುಂಬದ ಏಳಿಗೆಗಾಗಿ ಸವೆದ ಶ್ರೀಗಂಧ

ನೋಡಾ ಚೈತನ್ಯ ಪತದ ಚೆನ್ನಬಸವೇಶ್ವರಾ" (ಆಧುನಿಕ ವಚನಕಾರರರು, ಆರ್.ಡಿ.ಜಿ., ೨೦೦೯, ಪು-೭೦,೭೧)

ಹೆಣ್ಣನ್ನು ಹಿಯಾಳಿಸುವವರನ್ನು ಈ ವಚನದಲ್ಲಿ ಖಂಡಿಸಲಾಗಿದೆ. ಸಮಾಜದಲ್ಲಿ ಗಂಡಿಗೆ ಸಿಗುವ ಪ್ರಾಶಸ್ತ್ಯ ಹೆಣ್ಣಿಗೆ ಸಿಗುತ್ತಿಲ್ಲ. ಆದರೆ ಹೆಣ್ಣು ಸಂಸಾರದ ಕಣ್ಣಾಗಿರುವಳು. ಸ್ತ್ರೀ-ಪುರುಷರಿಬ್ಬರೂ ಸಮಾನರು ಎಂಬುದು ಈ ವಚನದ ಆಶಯವಾಗಿದೆ. ಸಂಚೀಯ ಹೊನ್ನಮ್ಮಳು ತನ್ನ ಹದಿಬದೆಯ ಧರ್ಮ ಕೃತಿಯಲ್ಲಿ ಹೆಣ್ಣನ್ನು ಹಿಯಾಳಿಸುವವರನ್ನು ಪ್ರಶ್ನಿಸುವಳು. ಮುಂದುವರಿದು ಅವರನ್ನು ಕಣ್ಣು ಕಾಣದ ಗಾವಲಿಗರು ಎಂದು ಹೇಳುವಳು. ಇದೇ ಭಾವ ಈ ವಚನದಲ್ಲಿ ವ್ಯಕ್ತವಾಗಿದೆ.

ಎಸ್.ವಿ.ಪರಮೇಶ್ವರ ಭಟ್ಟರು ಕೌಟುಂಬಿಕ ನೆಲೆಯ ಹಿನ್ನಲೆಯಲ್ಲಿ ಆಧುನಿಕ ಸ್ತ್ರೀ-ಪುರುಷರ ಭಿನ್ನ ದೃಷ್ಟಿಕೊನವನ್ನು ತಮ್ಮ ಒಂದು ವಚನದಲ್ಲಿ,

"ಸ್ಕೂಟರ್ ನಡೆಸುವ ಗಂಡನ ಮುಖ

ಪಯಣ ದಿಕ್ಕಿಗೆ ಮನೆಯ ಕಡೆಗೆ

ಹಿಂದೆ ಕುಳಿತ ಹೆಂಡತಿಯ ಮುಖ

ಬೀದಿಯ ದಿಕ್ಕಿಗೆ ಅಂಗಡಿಯ ಕಡೆಗೆ

ಹೀಗೆ ಪತಿಯ ಮುಖ ಅತ್ತ ಸತಿಯ ಮುಖ ಇತ್ತ" (ವಚನ ಸಾಹಿತ್ಯ ಸಮೀಕ್ಷೆ, ವ್ಹಿ.ಜಿ.ಪುಜಾರ, ೨೦೦೯, ಪು-೧೮೭)

ಹೀಗೆ ಗಂಡ ಹೆಂಡತಿಯ ಭಿನ್ನ ಧೋರಣೆಯನ್ನು ಕೆಲವು ನಿದರ್ಶನಗಳೊಂದಿಗೆ ಇಲ್ಲಿ ಹೇಳಲಾಗಿದೆ. ಈ ವೈರುದ್ಯಗಳು ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಈ ರೀತಿಯ ಭಿನ್ನತೆಯನ್ನು ಮೀರಿ ಒಂದಾಗಿ ಬಾಳಿದರೆ ಬಾಳು ಸೌಖ್ಯವಾಗಿರುತ್ತದೆ. ಆ ಕಾರಣದಿಂದ ವೈರುದ್ಯತೆಯನ್ನು ಬಿಟ್ಟು ಒಂದಾಗಿ ಬಾಳಬೇಕು ಎಂಬುದು ಈ ವಚನದ ಆಶಯವಾಗಿದೆ.

ಆಧುನಿಕ ವಚನಕಾರರು ತಮ್ಮ ವಚನಗಳಲ್ಲಿ ಹಲವು ಮಾನವೀಯ ಮೌಲ್ಯಗಳನ್ನು ಕಟ್ಟಿ ಕೊಟ್ಟಿದ್ದಾರೆ. ಅಲ್ಲದೇ ಹಲವು ನೀತಿ ಬೋಧನೆಗಳನ್ನು ಮಾಡಿದ್ದಾರೆ. ಕುಮಾರಕಕ್ಕಯ್ಯ ಪೋಳ ಅವರ ವಚನ

"ಪಾಂಡಿತ್ಯಕ್ಕಿಂತ ಆಚಾರ ದೊಡ್ಡದು

ಶಾಸ್ತ್ರಕ್ಕಿಂತ ಅನುಭಾವ ದೊಡ್ಡದು

ಪೂಜೆಗಿಂತ ಕಾಯಕ ದೊಡ್ಡದು

ದೇವರಿಗಿಂತ ಸತ್ಯ ಬಹುದೊಡ್ಡದು

ಇಂತೀ ಅರಿವಿನ ಆಳ ದಾಟಿದ

ತಿಳುವಳಿಕೆಯೇ ಆತ್ಮಜ್ಞಾನವೆಂದ ಕುಮಾರಕಕ್ಕಯ್ಯಾ!" (ಆಯ್ದ ವಚನಗಳು, ಬಸವರಾಜ ಸಬರದ, ೨೦೧೪, ಪು-೬೬)

ಪರಂಪರೆಯಿಂದ ಯಾವುದನ್ನು ನಾವು ಶ್ರೇಷ್ಠ ಎಂದು ತಿಳಿದುಕೊಡು ಬಂದಿದೆವೋ, ಅದು ಶ್ರೇಷ್ಠ ಅಲ್ಲ, ಬದಲಾಗಿ ಆಚಾರ, ಅನುಭಾವ, ಕಾಯಕ, ಸತ್ಯ ಶ್ರೇಷ್ಠ ಎಂದು ಇಲ್ಲಿ ಹೇಳಲಾಗಿದೆ. ಈ ವಚನದಲ್ಲಿ ಪಾಂಡಿತ್ಯ, ಶಾಸ್ತ್ರ, ಪೂಜೆ, ದೇವರು ಶ್ರೇಷ್ಠತೆಯ ಕಲ್ಪನೆಯನ್ನು ಅಲ್ಲಗಳೆಯಲಾಗಿದೆ. ಜೀವನ ಮೌಲ್ಯಗಳ ಕುರಿತು ಬಸವರಾಜ ಸಬರದ ಅವರ ವಚನ

"ಏನು ಓದಿ ಏನು ಫಲವಯ್ಯ
ವರದಕ್ಷಿಣೆ ಪಡೆದು ಮದುವೆಯಾದರೆ
ಏನು ತಿಳಿದು ಏನು ಫಲವಯ್ಯಾ
ಜಾತಿ ಜಂಜಾಟದಿಂದ ಹೊರ ಬರದಿದ್ದರೆ
ಏನು ನೋಡಿ ಏನು ಫಲವಯ್ಯ
ಸಮಾನತೆಯಿಂದ ಬದುಕದಿದ್ದರೆ
ಏನು ಓದಿದರೇನು?
ಎಷ್ಟು ಕೇಳಿದರೇನು?
ನುಡಿದಂತೆ ನಡೆಯದಿದ್ದರೆ
ಕಡೆಗಾಗುವನು ನೋಡಾ
ನಮ್ಮ ಸಬರದ ಬಸವ"(ಆಧುನಿಕ ವಚನಕಾರರರು, ಆರ್.ಡಿ.ಜಿ., ೨೦೦೯, ಪು-೯೪,೯೫)

ಈ ವಚನದಲ್ಲಿ ಆಧುನಿಕ ಸಮಾಜದಲ್ಲಿ ಸಾಮಾಜಿಕ ಪಿಡುಗಾದ ವರದಕ್ಷಿಣೆಯನ್ನು ದಿಕ್ಕರಿಸಲಾಗಿದೆ. ಸಮಾಜದಲ್ಲಿನ ಜಾತಿ ಅಸಮಾನತೆಯನ್ನು ಇಲ್ಲಿ ದಿಕ್ಕರಿಸಲಾಗಿದೆ. ಆ ಮೂಲಕ ಸಮಾನತೆಯನ್ನು ಸಾರಲಾಗಿದೆ.

ವಚನ ಸಾಹಿತ್ಯದಲ್ಲಿ ಆಳವಾಗಿ ಅದ್ಯಯನಮಾಡಿ, ಅಪಾರ ವಿದ್ವತ್ತು ಪಡೆದ ಜಯಶ್ರೀ ದಂಡೆಯವರು ಅನೇಕ ವಚನಗಳನ್ನು ರಚಿಸಿದ್ದಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ಬದುಕಬೇಕು ಎನ್ನುವಂತೆ ಜಯಶ್ರೀ ದಂಡೆಯವರ ವಚನ

"ಜಗದ ಸಾಸ್ಥರ್ಂಯ ಕದಡಿಹುದೆಂದು
ಕರಗಿ-ಕೊರಗಿ, ಮರುಗಿ ತಿರುಗದೆ,
ಮೊದಲು ನಿನ್ನ ಮನದ ಮನೆಯವರ
ಸ್ವಾಸ್ಥರ್ಂಯವ ಕುರಿತು ಚಿಂತಿಸಿ, ವಿಚಾರಿಸಿ
ನಡೆಯುವುದೇ ಧರ್ಮ ಕಾಣಾ
ನಿಜಗುರು ಮಹಾಂತಲಿಂಗ "(ಗುಲಬರ್ಗಾ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ, ರಾಮಚಂದ್ರ ಗಣಾಪುರ, ೨೦೧೨, ಪು-೭೩)

ಮನುಷ್ಯ ಜೀವನದಲ್ಲಿ ಬೇರೆಯವರ ಬಗ್ಗೆ ಯೋಚಿಸುತ್ತಾ, ಬೇರೆಯವರ ಬಗ್ಗೆ ಮಾತನಾಡುತ್ತ ತನ್ನ ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತಾನೆ. ಆದರೆ ಅವನು ಯೋಚಿಸ ಬೇಕಾಗಿರುವುದು ತನ್ನ ಬಗ್ಗೆ, ತನ್ನ ಜವಾಬ್ದಾರಿಯನ್ನು ಮೊದಲು ಅರಿತು ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಇಲ್ಲಿ ಹೇಳಲಾಗಿದೆ. ಈ ವಚನ ಬಸವಣ್ಣನ 'ಲೋಕದ ಡೊಂಕು ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮದೇವ' ಎನ್ನುವ ವಚನವನ್ನು ನೆನಪಿಸುತ್ತದೆ. ಈ ವಚನದಲ್ಲಿ ಆತ್ಮ ವಿಮರ್ಶೆ ವ್ಯಕ್ತವಾಗಿದೆ.

ಜೀವನದಲ್ಲಿ ವ್ಯಕ್ತಿ ಅನ್ಯರ ಹೊಗಳಿಕೆಗೆ ಹಿಗ್ಗದೆ, ಅನ್ಯರ ತೆಗಳಿಕೆಗೆ ಕುಗ್ಗದೆ ನಿಷ್ಪಕ್ಷಪಾತವಾಗಿ ತನ್ನ ಕೆಲಸ ಮಾಡಬೇಕಾಗುತ್ತದೆ. ಈ ಕುರಿತಂತೆ ಆಧುನಿಕ ವಚನಕಾರರಾದ ಮೂ.ಜ.ಗಂ. ಅವರ ಒಂದು ವಚನ,

"ದೂಷಿಸುವವರು ದೂಷಿಸಲಿ

ಅದು ಅವರ ಕರ್ಮವಯ್ಯ

ಸ್ತುತಿಸುವವರು ಸ್ತುತಿಸಲಿ

ಅದು ಅವರ ಧರ್ಮವಯ್ಯ

ಕುಗ್ಗಿ ಕರ್ತವ್ಯ ಬಿಡದಂತೆ

ಹಿಗ್ಗಿ ಹಮ್ಮು ಪಡದಂತೆ

ಕರುಣಿಸಿ ಕಾಪಾಡಯ್ಯ ಭ್ರೂಲತಾಪುರೀಶ ಕತೃ

ಜಗದ್ಗುರು ಗುರುಸಿದ್ಧೇಶ್ವರಾ"(ವಚನ ಸಾಹಿತ್ಯ ಸಮೀಕ್ಷೆ, ವ್ಹಿ.ಜಿ.ಪೂಜಾರ, ೨೦೦೯, ಪು-೧೩೦)

ಇಲ್ಲಿ ವ್ಯಕ್ತಿ ಯಾವುದೆ ಬಾಹ್ಯ ಪ್ರಭಾವಕ್ಕೆ ಒಳಗಾಗದೆ ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂಬ ಆಶಯ ವ್ಯಕ್ತವಾಗಿದೆ. ಸಮಾಜದಲ್ಲಿ ಕೆಲವರು ನಮ್ಮ ಮೇಲೆ ಸುಳ್ಳು ಆರೋಪ ಹೊರಿಸುವರು, ಆವಾಗ ನಾವು ಕುಗ್ಗದೆ ನಮ್ಮ ಕೆಲಸವನ್ನು ನಾವು ಮಾಡಬೇಕು. ಕೆಲವರು ನಮಗೆ ಹೊಗಳಿ ತಮ್ಮ ಕೆಲಸ ಮಾಡಿಕೊಳ್ಳುವರು, ಆವಾಗ ನಾವು ಹಿಗ್ಗದೆ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು ಎಂಬುದು ಇಲ್ಲಿ ಧ್ವನಿತವಾಗಿದೆ.

ಸಿದ್ಧಯ್ಯ ಪುರಾಣಿಕರು ಆಧುನಿಕ ವಚನ ಸಾಹಿತ್ಯದ ಪ್ರಮುಖ ವಚನಕಾರರು. ಸತ್ವಯುತವಾದ ಅನೇಕ ವಚನಗಳನ್ನು ರಚಿಸಿದ್ದಾರೆ. ಮನುಷ್ಯನ ಜೀವನ ಮೌಲ್ಯಗಳಲ್ಲಿ ಒಂದಾದ 'ವಿನಯ' ಕುರಿತಂತೆ ಸಿದ್ಧಯ್ಯ ಪುರಾಣಿಕರ ವಚನ

"ಫಲವಿತ್ತ ರೆಂಬೆ ಬಾಗುತ್ತದೆ

ಗೊನೆ ಹೊತ್ತ ಬಾಳೆ ಬಾಗುತ್ತದೆ

ತೆನೆ ಹೊತ್ತ ದಂಟು ಬಾಗುತ್ತದೆ

ಏನೇನೂ ಇಲ್ಲದುದು

ಬೀಗುತ್ತದೆ ನೋಡಾ ಸ್ವತಂತ್ರಧೀರ ಸಿದ್ದೇಶ್ವರಾ!"(ಆಯ್ದ ವಚನಗಳು, ಬಸವರಾಜ ಸಬರದ, ೨೦೧೪, ಪು-೬೨)

ಇಲ್ಲಿ ಯಾರು ಅಂತರಂಗದಿಂದ  ಜ್ಞಾನಿಯಾಗಿರುತ್ತಾರೊ, ಅವರಲ್ಲಿ ವಿನಯವಿರುತ್ತದೆ ಎಂದು ಹೇಳಲಾಗಿದೆ. ಗೊನೆ ಹೊತ್ತ ಬಾಳೆ ಬಾಗಿದಂತೆ, ತೆನೆ ಹೊತ್ತ ದಂಟು ಬಾಗಿದಂತೆ, ಹೆಚ್ಚು ತಿಳಿದವನು ವಿನಯದಿಂದ ಕೂಡಿರುತ್ತಾನೆ. 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆಯನ್ನು ಈ ವಚನ ನೆನಪಿಸುತ್ತದೆ. ವಿನಯ ವ್ಯಕ್ತಿಯ ವ್ಯಕ್ತಿತ್ವದ ವಿಕಸನೆಗೆ ಬೇಕಾದ ಅಂಶ, ಆದ್ದರಿಂದ ಮನುಷ್ಯನಲ್ಲಿ ವಿನಯ ಇರಬೇಕು ಎಂಬುದು ಈ ವಚನದ ಆಶಯವಾಗಿದೆ.

ಆಧುನಿಕ ವಚನಗಳಲ್ಲಿ ಬಸವಾದಿ ಶರಣರಂತೆ ಸಜ್ಜನರ ಸಂಗ ಸಾರುವ ಹಲವು ವಚನಗಳು ರಚನೆಯಾಗಿವೆ. ಈ ಕುರಿತಂತೆ ವಿಜಯಶ್ರೀ ಸಬರದ ಅವರ ವಚನ

"ಹಾರುವ ಹಕ್ಕಿಗಳು ರೆಕ್ಕೆ ಕಿತ್ತುವರಯ್ಯ

ಕುಣಿವ ನವಿಲಿನ ಕಾಲು ಮುರಿವರಯ್ಯ

ನೆರಳಿರುವ ಮರವನು ಕಡಿಯುವರಯ್ಯ

ಇಂತಪ್ಪವರ ಸಂಗ

ಉಡಿಯಲ್ಲಿ ಕಟ್ಟಿಕೊಂಡ ಕೆಂಡದಂತೆ ನೋಡಯ್ಯ

ವಿಜಯ ಪ್ರಿಯ ಬಸವ"(ಬೀದರ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ, ಹಂಶಕವಿ, ೨೦೧೪, ಪು-೩೩)

ಈ ವಚನದಲ್ಲಿ ದುಷ್ಟ ಜನರ ಸಹವಾಸದಿಂದ ಆಗುವ ಅನಾಹುತಗಳು, ತೊಂದರೆಗಳು ಮತ್ತು ಅವರು ತಂದೊಡ್ಡುವ ಸಮಸ್ಯೆಗಳನ್ನು ಚಿತ್ರಿಸಲಾಗಿದೆ. ಹಾರುವ ಹಕ್ಕಿಗಳ ರೆಕ್ಕೆ ಕಿತ್ತರೆ, ಅದು ಹಾರಲು ಆಗುವುದಿಲ್ಲ. ಕುಣಿವ ನವಿಲಿನ ಕಾಲು ಮುರಿದರೆ, ಅದು ಕುಣಿಯಲಾಗುವುದಿಲ್ಲ. ನೆರಳನ್ನು ನೀಡುವ ಮರವನ್ನು ಕಡಿಯುವರು. ಈ ರೀತಿಯ ಕೆಲಸವನ್ನು ದುರ್ಜನರು ಮಾಡುತ್ತಾರೆ. ದುರ್ಜನರ ಸಹವಾಸ ಮಾಡಬಾರದು, ಸಜ್ಜನರ ಸಹವಾಸ ಮಾಡಬೇಕು ಎಂಬುದು ಈ ವಚನದ ಆಶಯವಾಗಿದೆ.

ಸಮಕಾಲೀನ ಜನರ ನಡೆ-ನುಡಿ ಭಿನ್ನವಾಗಿದ್ದನ್ನು ಪ್ರಮುಖ ಆಧುನಿಕ ವಚನಕಾರರಾದ ಬಸವರಾಜ ಸಬರದ ಅವರು ತಮ್ಮ ಒಂದು ವಚನದಲ್ಲಿ,

"ಬಂದೆನೆಂಬರು ಬಾರದೆ ಇರುವರು

ಇರುವೆನೆಂಬರು ಹೇಳದೆ ಹೋಗುವರು

ಹೋಗುವೆನೆಂಬರು ಹಾಗೇ ಉಳಿವರು

ಉಳಿವೆನೆಂಬವರು ರಾತ್ರಿಯೇ ಹೋದರು

ಹೀಗೆ ಬಂದೆನೆಂದು  ಬಾರದಿರುವ

ಇರುವೆನೆಂದು ಇರದೇ ಇರುವ

ಭಾವ ಯಾವುದಯ್ಯಾ, ಅನುಭಾವ ಯಾವುದಯ್ಯ?

ಬಂದೆನೆಂದು  ಹೇಳುವುದೇ ಬೆಳ್ಳಕ್ಕಿ!

ಬಾರೆನೆಂದು ಹಾರುವುದೇ ಮರಿದುಂಬಿ!

ಬAದು ಹೋಗುವ ಹೋಗಿ ಬರುವ

ಇದ್ದರೂ ಇರದ, ಇರದಿದ್ದರೂ ಇರುವ

ಬದುಕಿನ ಪರಿಯನೆಂತು

ಹೇಳಲಿ ಸಬರದ ಬಸವ!"(ಸಬರದ ಬಸವನ ವಚನಗಳು, ಬಸವರಾಜ ಸಬರದ, ೨೦೧೫, ಪು-೪೧)

ಇಲ್ಲಿ ಕೆಲವು ನಿದರ್ಶನಗಳೊಂದಿಗೆ ಜನರ ಭಿನ್ನ ಧೋರಣೆಯನ್ನು ವಿಡಂಬಿಸಲಾಗಿದೆ. ಜನರು ಹೇಳುವುದೆ ಒಂದು, ಮಾಡುವುದೆ ಇನ್ನೊಂದು. ಈ ರೀತಿಯ ಜನರ ಮನೋಭಾವವನ್ನು ಇಲ್ಲಿ ಖಂಡಿಸಲಾಗಿದೆ. ಬಸವಾದಿ ಶರಣರು ಹೇಳಿದಂತೆ ನಮ್ಮ ನಡೆ-ನುಡಿ ಒಂದಾಗಿರಬೇಕು ಎಂಬುದೆ ಈ ವಚನದ ಆಶಯವಾಗಿದೆ.

ಬಸವಾದಿ ಶರಣರಂತೆ ಆಧುನಿಕ ವಚನಕಾರರ ವಚನಗಳಲ್ಲಿಯೂ ಸ್ವವಿಮರ್ಶೆಯನ್ನು ಕಾಣಬಹುದು. ಈ ಕುರಿತಂತೆ ಸಿ.ಪಿ.ಕೆ. ಅವರ ಒಂದು ವಚನ,

"ಕಾಮ, ಕ್ರೋಧಗಳಿಗೆ ಮನಸ್ಸು ಕೊಟ್ಟೆನಯ್ಯ,

ಲೋಭ, ಮೋಹಗಳಿಗೆ ಮನಸ್ಸು ಕೊಟ್ಟೆನಯ್ಯ,

ಮದ, ಮತ್ಸ್ಯಗಳಿಗೆ ಮನಸ್ಸು ಕೊಟ್ಟೆನಯ್ಯ,

ನಾನು ಮಾಡಿದ ತಪ್ಪುಗಳಿಗೆ ಲೆಕ್ಕವಿಲ್ಲವಯ್ಯ,

ಪಾಪಕೂಪದಿಂದ ನನ್ನನ್ನು ಮೇಲೆತ್ತಿ ಕಾಪಾಡಯ್ಯ,

ಶಾಪ ಸರಣಿಯಿಂದ ಬಿಡುಗಡೆಗೊಳಿಸಯ್ಯ

ನೀನು ಪ್ರೇರಿಸದೆ ನಾನು ಜಾರಿದೆನೆ?

ನನ್ನ ಏಳು ಬೀಳುಗಳಿಗೆ ನೀನೆ ಜವಾಬ್ದಾರ ಕಾಣಾ ಕಾರಣಿಕ ಪ್ರಭುವೆ!"(ವಚನ ಸಾಹಿತ್ಯ ಸಮೀಕ್ಷೆ, ವ್ಹಿ.ಜಿ.ಪೂಜಾರ, ೨೦೦೬, ಪು-೧೮೧)

ಈ ವಚನದಲ್ಲಿ ವಚನಕಾರ ತಾನು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಹಾಳಾಗುತ್ತಿರುವೆ, ಲೆಕ್ಕವಿಲ್ಲದಷ್ಟು ತಪ್ಪು ಮಾಡುತ್ತಿರುವೆ ಎಂದು ಸ್ವವಿಮರ್ಶೆಯನ್ನು ಮಾಡಿಕೊಳ್ಳುತ್ತಾರೆ. ಮುಂದುವರಿದು ತನ್ನ ಇಷ್ಟದೈವದ ಮೊರೆಹೋಗಿ ತನ್ನ ತಪ್ಪುಗಳನ್ನು ಕ್ಷಮಿಸುವಂತೆ ಕೇಳಿಕೊಳ್ಳುತ್ತಾರೆ. ಬಸವಣ್ಣನ 'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ' ಎನ್ನುವ ವಚನದ ದಾಟಿಯಲ್ಲಿ ಈ ವಚನ ರಚನೆಯಾಗಿದೆ. ಶರಣರೂ ಮೊದಲು ಸ್ವವಿಮರ್ಶೆ ಮಾಡಿಕೊಂಡು ನಂತರ ಸಮಾಜ ವಿಮರ್ಶೆಯಲ್ಲಿ ತೊಡಗಿದ್ದರು. ಅಂತೆಯೆ ಆಧುನಿಕ ವಚನಕಾರರಲ್ಲಿ ಸ್ವವಿಮರ್ಶೆಯಿರುವುದು ಗಮನಾರ್ಹವಾಗಿದೆ. ಅಂತರಂಗದ ತಳಮಳ, ನಿವೇದನೆ ಕುರಿತಂತೆ ಕಮಲಾ ಹಂಪನಾ ಅವರ ವಚನ,

"ಆಕಾಶವಾಣಿಯ ಸಮಾಚಾರದ ಮೊರೆ

ದೂರವಾಣಿಯ ಟ್ರೆಣ್ ಟ್ರೆಣ್ ಕರೆ

ಕರೆ ಗಂಟೆಯ ಕುಕಿಲ ಕರೆ

ಮಕ್ಕಳ ಮಮತೆಯ ಕರೆ

ಇನಿಯನ ಇನಿದನಿಯ ಕರೆ

ಈ ವಿವಿಧ ಕರೆಗಳ ನಡುವೆ

ಎಂತು ಕೇಳುವೆ ನಾನು

ನನ್ನಂತರಂಗದ ಕರೆಯ ಕಮಲಾಪ್ರಿಯ"(ವಚನ ಸಾಹಿತ್ಯ ಸಮೀಕ್ಷೆ, ವ್ಹಿ.ಜಿ.ಪೂಜಾರ, ೨೦೦೯, ಪು-೧೬೮)

ಈ ವಚನದಲ್ಲಿ ವ್ಯಕ್ತಿಯು ತನ್ನ ಸಂಸಾರಿಕ ಜೀವನದಲ್ಲಿ ವಿವಿಧ ಬಗೆಯಲ್ಲಿ ಬಂಧಿಯಾಗಿ ತನ್ನನ್ನು ತಾನು ಅರಿಯದ ಸ್ಥಿತಿಯಲ್ಲಿ ಬದುಕುತ್ತಿರುವ ಸಂಗತಿ ವ್ಯಕ್ತವಾಗಿದೆ. ವ್ಯಕ್ತಿ ಅನ್ನರೊಂದಿಗೆ ಮಾತನಾಡುವ ಮೊದಲು ತನ್ನ ಅಂತರಂಗದ ಜೊತೆ ಮಾತನಾಡಬೇಕು, ಅನ್ಯರನ್ನು ಅರಿಯುವ ಮೊದಲು ತನ್ನನ್ನು ತಾನು ಅರಿಯಬೇಕು ಬೇಕು ಎಂಬ ಆಶಯ ವ್ಯಕ್ತವಾಗಿದೆ.

ಮನುಷ್ಯನ ಬದುಕಿನ ಸಂಸಾರಿಕ ಜೀವನದಲ್ಲಿನ ವಿವಿಧ ಬಗೆಯ ಚಿಂತೆಗಳ ಕುರಿತು ಹಲವು ವಚನಗಳು ರಚನೆಯಾಗಿವೆ. ಅದಕ್ಕೆ ಸಂಬಧಿಸಿದಂತೆ ಸೂಗಯ್ಯ ಹಿರೇಮಠ ಅವರ ವಚನ

"ಮಳೆ ಬಂದರು ಚಿಂತೆ

ಬಾರದಿದ್ದರೂ ಚಿಂತೆ ನೋಡಯ್ಯಾ

ಭಾರಿ ಮಳೆ ಬಂದು ಮನೆಕುಸಿದು

ಸತ್ತವರ ಸ್ಥಿತಿ ನೋಡದಯ್ಯಾ

ಮಳೆಯಿಲ್ಲದೆ ಬರಗಾಲಕ್ಕೆ ತುತ್ತಾಗಿ

ನೀರಿಲ್ಲದೆ ಸತ್ತವರ ಪರಿ ಎಂಥದಯ್ಯ

ನೀರೆ ಸಕಲ ಜೀವಿಗಳ ಆಹಾರಕ್ಕೆ

ಅನಾಹುತಕ್ಕೆ ಕಾರಣವಯ್ಯ

ಸುವರ್ಣ ಮಹೋತ್ಸವದ ಸೂಗೂರೇಶ್ವರ"(ವಚನಕಾರಂಜಿ, ಹಂಶಕವಿ, ೨೦೦೭, ಪು-೧೨೫)

ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದಾಗುವ ಅನಾಹುತಗಳ ಕುರಿತು ಇಲ್ಲಿ ಹೇಳಲಾಗಿದೆ. ಅತಿಯಾಗಿ ಮಳೆ ಬಂದರೆ ಪ್ರವಾಹವಾಗಿ ಜೀವರಾಶಿಗಳಿಗೆ ಹಾನಿಯುಂಟಾಗುತ್ತದೆ. ಅದೊಂದು ಮನುಷ್ಯನಿಗೆ ಚಿಂತೆಯಾಗಿ ಪರಿಣಮಿಸುತ್ತದೆ. ಸ್ವಲ್ಪವೂ ಮಳೆ ಬಾರದಿದ್ದರೆ ಬರಗಾಲವಾಗಿ ಮನುಷ್ಯನಿಗೆ ಚಿಂತೆಯಾಗಿ ಕಾಡುತ್ತದೆ. ಅದಕ್ಕೆ ಎಲ್ಲವೂ ಹಿತ-ಮಿತವಾಗಿ ಇರಬೇಕು ಎಂಬುದು ಈ ವಚನದ ಆಶಯವಾಗಿದೆ. ಮನುಷ್ಯನ ಸಂಸಾರಿಕ ಚಿಂತೆಯ ಕುರಿತು ಸಿ.ಪಿ.ಕೆ. ಅವರ ವಚನ

"ಮದುವೆಯಾಗಲಿಲ್ಲವೆಂಬುದು ಕೆಲವರ ಚಿಂತೆ,

ಮಕ್ಕಳಾಗಲಿಲ್ಲವೆಂದು ಕೆಲವರ ಚಿಂತೆ,

ಗಂಡಾಗಲಿಲ್ಲವೆಂದು ಕೆಲವರ ಚಿಂತೆ,

ಮಕ್ಕಳು ಅಂಗವಿಕಲರಾದರೆಂದು ಕೆಲವರ ಚಿಂತೆ,

ಮಕ್ಕಳು ಕೈಬಿಟ್ಟರೆಂದು ಕೆಲವರ ಚಿಂತೆ,

ಸAಸಾರ ಚಿಂತೆಯಸಂತೆಯೆ, ಕಂತೆಯೇ ಕಾರಣಿಕ ಪ್ರಭುವೆ?"(ಆಯ್ದ ವಚನಗಳು, ಬಸವರಾಜ ಸಬರದ, ೨೦೧೪, ಪು-೭೬)

ಜೀವನದಲ್ಲಿ ಮನುಷ್ಯ ಒಂದಲ್ಲಾ ಒಂದು ಚಿಂತೆಯಲ್ಲಿ ಬದುಕುತ್ತಿರುತ್ತಾನೆ. ಯುವಜನಕ್ಕೆ ಮದುವೆ ಆಗಬೇಕೆಂಬ ಚಿಂತೆ ಇರುತ್ತದೆ. ಮದುವೆಯಾದ ಮೇಲೆ ಮಕ್ಕಳು ಆಗಲಿಲ್ಲ ಎಂಬ ಚಿಂತೆ ಇರುತ್ತದೆ. ಮಕ್ಕಳು ಆದರೆ, ಆ ಮಗು ಹೆಣ್ಣು ಇದ್ದರೆ, ಗಂಡು ಮಗು ಆಗಲಿಲ್ಲ ಎಂಬ ಚಿಂತೆ ಹುಟ್ಟುಕೊಳ್ಳುತ್ತದೆ. ಒಂದು ವೇಳೆ ಮಗು ಅಂಗವಿಕಲವಿದ್ದರೆ, ಮಗು ಅಂಗವಿಕಲವಾಯಿತೆಂದು ಚಿಂತೆ ಹುಟ್ಟಿ ಕೊಳ್ಳುತ್ತದೆ. ಹೀಗೆ ಬದುಕಿನುದ್ದಕ್ಕೂ ಹಲವಾರು ಚಿಂತೆಗಳು ಇರುತ್ತದೆ. ಆ ಎಲ್ಲಾ ಚಿಂತೆಗಳನ್ನು ಮೀರಿ ಬದುಕಬೇಕು ಎಂಬುದು ಈ ವಚನದ ಆಶಯವಾಗಿದೆ.

ಒಟ್ಟಿನಲ್ಲಿ ಆಧುನಿಕ ವಚನಗಳಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಮಾನವೀಯ ಮೌಲ್ಯಗಳು, ನೀತಿ ಬೋಧನೆ, ಸಾಮಾಜಿಕ ವಿಡಂಬನೆ, ರಾಜಕೀಯ ವಿಡಂಬನೆ, ಜಾತಿ ಸಮಾನತೆ, ಲಿಂಗ ಸಮಾನತೆ, ಸಜ್ಜನರ ಸಂಗ, ಮೌಢ್ಯತೆಯ ಖಂಡನೆ, ಭ್ರಮೇಯ ನಿರಾಕರಣೆ, ಚಿಂತೆಗಳನ್ನು ಮೀರಿ ಬದುಕಬೇಕು ಮುಂತಾದವು ಪ್ರಮುಖ ಆಶಯ ಹಾಗೂ ಧೋರಣೆಗಳಾಗಿ ಕಂಡು ಬರುತ್ತದೆ. ಸಮಕಾಲೀನ ಸಮಸ್ಯೆಗಳೇ ಆಧುನಿಕ ವಚನಗಳ ಮುಖ್ಯ ವಸ್ತುವಾಗಿದೆ. ಈ ಆಧುನಿಕ ವಚನಕಾರರ ಮೇಲೆ ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಮತ್ತು ಅವರ ವಚನಗಳ ಪ್ರಭಾವ ಮತ್ತು ಪ್ರೇರಣೆ ಗಾಢವಾಗಿದೆ. ಬಸವಾದಿ ಶರಣರ ವಚನಗಳಂತೆ ಆಧುನಿಕ ವಚನಗಳು ನಮ್ಮ ಬದುಕನ್ನು ಅರ್ಥಪೂರ್ಣವಾಗಿ ಕಟ್ಟಿಕೊಳ್ಳಲು ಸಹಾಯಕವಾಗಿವೆ. ಆಧುನಿಕ ವಚನಕಾರರರಿಗೆ ವಚನಗಳು ಎಂಬುದು ಒಂದು ಚಳುವಳಿ ಮಾದ್ಯಮವಾಗದೆ; ಕೇವಲ ಸಾಹಿತ್ಯ ಮಾದ್ಯಮವಾಗಿದೆ. ಆದರೂ ಸಹ ವಚನಗಳ ರಚನೆಯನ್ನು ಆಧುನಿಕ ಸಂದರ್ಭದಲ್ಲಿ ಜಿವಂತವಾಗಿಟ್ಟಿದ್ದು ಗಮನಾರ್ಹವಾಗಿದೆ.

- **ಪರಾಮರ್ಶನ ಗ್ರಂಥಗಳು:**

೧. ವಚನ ಸಾಹಿತ್ಯ, ಎಂ. ಚಿದಾನಂದಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೨೦.

೨.ವಚನ ಸಾಹಿತ್ಯ ಸಮೀಕ್ಷೆ, ವ್ಹಿ.ಜಿ.ಪೂಜಾರ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಕಲಬುರ್ಗಿ, ೨೦೦೯.

೩. ಆಧುನಿಕ ವಚನಕಾರರು, ಆರ್. ಡಿ. ಜಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೪. ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು, ಹಣಮಂತ ಬಿ. ಮೇಲಕೇರಿ, ಭುವನೇಶ್ವರಿ ಪ್ರಕಾಶನ, ಬೀದರ, ೨೦೧೪.

೫. ಗುಲಬರ್ಗಾ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ, ರಾಮಚಂದ್ರ ಗಣಾಪೂರ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲಬರ್ಗಾ, ೨೦೧೨.

೬. ಬೀದರ ಜಿಲ್ಲೆಯ ಆಧುನಿಕ ವಚನ ಸಾಹಿತ್ಯ, ಹಂಶಕವಿ, ವಿನಯ ಪ್ರಕಾಶನ, ಬೀದರ, ೨೦೧೪.

೭. ಆಯ್ದ ವಚನಗಳು, ಬಸವರಾಜ ಸಬರದ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,೨೦೧೪.

೮. ಸಬರದ ಬಸವನ ವಚನಗಳು, ಬಸವರಾಜ ಸಬರದ, ಸುಂದರ ಸಾಹಿತ್ಯ, ಬೆಂಗಳೂರು, ೨೦೧೫.

೯. ವಚನಕಾರಂಜಿ, ಹಂಶಕವಿ, ವಿನಯ ಪ್ರಕಾಶನ, ಬೀದರ, ೨೦೦೭.

೧೦. ಆಧುನಿಕ ವಚನಗಳು, ಹಂಶಕವಿ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲಬರ್ಗಾ, ೨೦೦೮.